# ಎನ್‌ಐಟಿಕೆ ಹಾಸ್ಟೆಲ್ ಲೋಕಾರ್ಪಣೆ

ಸಂ.ಕ.ಸಮಾಚಾರ, ಮಂಗಳೂರು

ಸುರತ್ಕಲ್ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯ(ಎನ್‌ಐಟಿಕೆ)ದಲ್ಲಿ ಒಟ್ಟು 132 ಕೋಟಿ ರೂ.ಗಳಲ್ಲಿ ನಿರ್ಮಿಸಲಾದ ಮೂರು ವಿದ್ಯಾರ್ಥಿ ಹಾಸ್ಟೆಲ್‌ನ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಂಗಳವಾರ ಐಐಎಂ ಜಮ್ಮುವಿನಿಂದ ವರ್ಚುವಲ್ ಮೂಲಕ ಲೋಕಾರ್ಪಣೆಗೊಳಿಸಿದರು.

ವಿವಿಧ ಯೋಜನೆಗಳ ಲೋಕಾರ್ಪಣೆ ವೇಳೆ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಶಿಕ್ಷಣ ಮತ್ತು ಕೌಶಲ್ಯ ಕ್ಷೇತ್ರದಲ್ಲಿ ಭಾರತ ದಾಪುಗಾಲು ಇಡುತ್ತಿದೆ. ದೇಶದಲ್ಲಿ ದಾಖಲೆ ಸಂಖ್ಯೆಯಲ್ಲಿ ಶಾಲಾ ಕಾಲೇಜು ಹಾಗೂ ವಿ.ವಿ.ಗಳನ್ನು ನಿರ್ಮಿಸಲಾಗಿದೆ ಎಂದು ಉನ್ನತ ಶಿಕ್ಷಣ ಕ್ಷೇತ್ರದ ಸಾಧನೆಗಳತ್ತ ಬೊಟ್ಟು ಮಾಡಿದರು.

ಈ ಸಂದರ್ಭ ಎನ್‌ಐಟಿಕೆಯಲ್ಲಿ ದ.ಕ.ಸಂಸದ ನಳಿನ್ ಕುಮಾರ್ ಕಟೀಲ್ ದೀಪ ಬೆಳಗಿಸಿ ಉದ್ಘಾಟಿಸಿ, ದ.ಕ.ಲೋಕಸಭಾ ಕ್ಷೇತ್ರಕ್ಕೆ ಕೇಂದ್ರದಿಂದ ಕಳೆದ 10 ವರ್ಷಗಳಲ್ಲಿ 79 ಸಾವಿರ ಕೋಟಿ ರೂ. ಅನುದಾನ ಲಭಿಸಿದೆ. ಈ ಪೈಕಿ ಸುರತ್ಕಲ್ ಎನ್‌ಐಟಿಕೆಗೆ 588 ಕೋಟಿ ರೂ. ಬಿಡುಗಡೆಗೊಂಡಿದೆ ಎಂದರು.

ಮಂಗಳೂರು ವಿ.ವಿ.ಸಂಶೋಧನಾ ವಿಭಾಗಕ್ಕೆ 20 ಕೋಟಿ ರೂ. ಬಿಡುಗಡೆಗೊಳಿಸಲಾಗಿದೆ. ಸ್ವಾತಂತ್ರ್ಯೋತ್ಸವದ ಅಮೃತ ಕಾಲದಲ್ಲಿ ಎಲ್ಲ ರಂಗಗಳಲ್ಲೂ ದೇಶ ಅಭಿವೃದ್ಧಿ ಕಾಣಬೇಕು ಎಂಬುದು ಪ್ರಧಾನಿಗಳ ಕನಸು. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ಮೂಲಕ ಶೈಕ್ಷಣಿಕವಾಗಿ ಪರಿವರ್ತನೆ ತರಲಾಗುತ್ತಿದೆ ಎಂದರು. 1960ರಲ್ಲಿ ಶ್ರೀನಿವಾಸ ಮಲ್ಯರು ಸ್ಥಾಪಿಸಿದ ಕೆಆರ್‌ಇಸಿ 2002ರಲ್ಲಿ ಎನ್‌ಐಟಿಕೆ ಆಗಿ ಪರಿವರ್ತನೆಗೊಂಡಿದೆ. ದೇಶ, ವಿದೇಶಗಳ ಸಾಧಕರು ಎನ್‌ಐಟಿಕೆ ವಿದ್ಯಾರ್ಥಿಗಳಾಗಿದ್ದರು ಎಂಬುದು ಹೆಮ್ಮೆಯ ಸಂಗತಿ. ದೇಶದ 12 ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳ ಪೈಕಿ ಎನ್‌ಐಟಿಕೆ ಕೂಡ ಒಂದು ಎಂದರು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಮಾತನಾಡಿ, ಎನ್‌ಐಟಿಕೆಯಲ್ಲಿ ಸಮಾಜಮುಖಿ ಶಿಕ್ಷಣ ಸಿಗುತ್ತಿದ್ದು, ಇದು ದೇಶದ ಭದ್ರ ಬುನಾದಿಗೆ ಅತ್ಯಗತ್ಯವಾಗಿದೆ ಎಂದು ಹೆಗ್ಗಳಿಕೆಯ ಸಂಗತಿ. ಸಂಶೋಧನೆ, ಆರೋಗ್ಯ ಸ್ನೇಹಿ ಪರಿಸರಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದರು. ಡೀನ್ ಚಿತ್ತರಂಜನ್ ಹೆಗ್ಡೆ ಪ್ರಾಸ್ತಾವಿಕ ಮಾತನಾಡಿದರು.. ಪಾಲಿಕೆ ಸದಸ್ಯೆ ಶೋಭಾ ರಾಣಿ, ಶ್ವೇತಾ, ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾ.ಗಣೇಶ್ ಕಾರ್ಣಿಕ್ ಉಪಸ್ಥಿತರಿದ್ದರು. ಪ್ರೊ.ಪುಷ್ಪರಾಜ್ ಶೆಟ್ಟಿ ವಂದಿಸಿದರು.



Samyuktha Karnataka, Date:21/02/24, p.no -03